# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಡಿ.ಕೆ.ಲಿಂಗರಾಜು, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ಇವರು ಕರ್ನಾಟಕ ಲೋಕಾಯುಕ್ತದಿಂದ ಲಂಚ ಪ್ರಕರಣದಲ್ಲಿ ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಕಾರಣ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ - ಆದೇಶ.

ಓದಲಾಗಿದೆ:-
1. ಪೊಲೀಸ್ ಉಪಾಧೀಕ್ಷಕರು-1 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ತುಮಕೂರು ಇವರ ಪತ್ರದ ಸಂಖ್ಯೆ: ಲೋಕ್ /ತುಮ/ಡಿವೈಎಸ್‌ಪಿ1/ಮೊ.ನಂ:13/2025,ದಿನಾಂಕ: 11.12.2025
2. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರದ ಸಂಖ್ಯೆ: DIC-LMI0ADM/97/2022/-ADM-E2:681029, ದಿನಾಂಕ:18.12.2025.

**********

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಪೊಲೀಸ್ ಉಪಾಧೀಕ್ಷಕರು-1 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ತುಮಕೂರು ಇವರು ದಿನಾಂಕ:11.12.2025ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇನ್ವೆಸ್ಟ್ ಕರ್ನಾಟಕ ಫೋರಂ, ಬೆಂಗಳೂರು ಹಾಗೂ ತುಮಕೂರು ನೋಡಲ್ ಅಧಿಕಾರಿಗಳು (ಡಿಐಸಿ) ರವರಿಗೆ ಬರೆದಿರುವ ಪತ್ರದಲ್ಲಿ ಪ್ರಕರಣದ ಪಿರ್ಯಾದಿ ಶ್ರೀ ಚನ್ನಬಸವೇಶ್ವರ.ಎಂ.ಎಸ್ ರವರ ಮಾಲೀಕತ್ವದ ಮೆಸರ್ಸ್॥ ಶಿವಲಿಂಗ ಇಂಡಸ್ಟ್ರೀಸ್‌ಗೆ ಸಂಬಂಧಿಸಿದಂತೆ ಮೊದಲ ಬಾರಿಗೆ ಉದ್ದಿಮೆ ಪ್ರಾರಂಭಿಸುವವರಿಗೆ ಸರ್ಕಾರದಿಂದ ಬರುವ ಸಹಾಯಧನದ ಮಂಜೂರಾತಿ ಆದೇಶ ಪತ್ರ ನೀಡಲು ಮುಂಗಡಾಗಿ 10,000-00 ರೂ. ಗಳನ್ನು ಪಡೆದಿದ್ದು, 1ನೇ ಆಪಾದಿತ ಅಧಿಕಾರಿ 2ನೇ ಆಪಾದಿತ ಅಧಿಕಾರಿ ಮುಖಾಂತರ ಪಿರ್ಯಾದಿಯಿಂದ 1,15,000-00 ರೂ. ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆಂದು ಪಿರ್ಯಾದಿ ಶ್ರೀ ಚನ್ನಬಸವೇಶ್ವರ ರವರು ದೂರು ನೀಡಿದ ಮೇರೆಗೆ, ತುಮಕೂರು ಲೋಕಾಯುಕ್ತ ಪೊಲೀಸ್ ಠಾಣಾ ಮೊ.ನಂ.13/2025 ಕಲಂ 7(a) ಪಿ.ಸಿ.ಆಕ್ಟ್-1988 (ತಿದ್ದುಪಡಿ ಕಾಯ್ದೆ-2018) ರೀತ್ಯ ಪ್ರಕರಣ ದಾಖಲಾಗಿದ್ದು, ಈ ದಿನ ಅಂದರೆ ದಿನಾಂಕ:11.12.2025 ರಂದು ಪಿರ್ಯಾದಿಯಿಂದ 1,15,000-00 ರೂ. ಗಳ ಲಂಚದ ಹಣವನ್ನು ಆಪಾದಿತರುಗಳ ಕಛೇರಿ ಕಾಪೌಂಡ್ ಮುಂಭಾಗ ಸಹಾಯಕ ನಿರ್ದೇಶಕರಾದ ಶ್ರೀ ಪ್ರಸಾದ್ ಎನ್.ಎಸ್ ರವರು ಪಡೆಯುವಾಗ ಟ್ರ್ಯಾಪ್ ಆಗಿರುತ್ತಾರೆ. ಆಪಾದಿತ-1 ಲಿಂಗರಾಜು ಡಿ.ಕೆ., ಜಂಟಿ ನಿರ್ದೇಶಕರು ಮತ್ತು ಆಪಾದಿತ-2 ಪ್ರಸಾದ್ ಎನ್.ಎಸ್., ಸಹಾಯಕ ನಿರ್ದೇಶಕರು ರವರುಗಳನ್ನು ಈ ದಿವಸ ದಿನಾಂಕ: 11-12-2025 ರಂದು ಆಪಾದಿತ-2 ಪ್ರಸಾದ್ ಎನ್.ಎಸ್., ಸಹಾಯಕ ನಿರ್ದೇಶಕರು ರವರನ್ನು ಮಧ್ಯಾಹ್ನ 03-00 ಗಂಟೆ ಸಮಯದಲ್ಲಿ ಅವರ ವಾಸದ ಮನೆಯಲ್ಲಿ ಮತ್ತು ಆಪಾದಿತ-1 ಅಂಗರಾಜು ಡಿ.ಕೆ, ಜಂಟಿ ನಿರ್ದೇಶಕರು ರವರನ್ನು ತುಮಕೂರು ಜಿಲ್ಲಾ ಕೈಗಾರಿಗಾ ಕೇಂದ್ರ ಕಛೇರಿಯಲ್ಲಿ ಸಂಜೆ 04-45 ಗಂಟೆಗೆ ವಶಕ್ಕೆ ಪಡೆದು ದಸ್ತಗಿರಿ ಕ್ರಮ ಅನುಸರಿಸಲಾಗಿರುತ್ತದೆ. ಈ ಪ್ರಕರಣದ ಆಪಾದಿತ-1 ಲಿಂಗರಾಜು ಡಿ.ಕೆ, ಜಂಟಿ ನಿರ್ದೇಶಕರು ಮತ್ತು ಆಪಾದಿತ-2 ಪ್ರಸಾದ್ ಎನ್.ಎಸ್. ಸಹಾಯಕ ನಿರ್ದೇಶಕರು ರವರುಗಳನ್ನು ತುಮಕೂರಿನ ಘನ 7ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ದಿನಾಂಕ: 18.12.2025ರ ಪತ್ರದಲ್ಲಿ, ಮೆ: ಶಿವಲಿಂಗ ಇಂಡಸ್ಟ್ರೀಸ್, ವಸಂತನರಸಾಪುರ ಕೈಗಾರಿಕಾ ಪ್ರದೇಶ, ತುಮಕೂರು ತಾಲ್ಲೂಕು ಘಟಕದ ಮಾಲೀಕರಾದ ಶ್ರೀ ಚನ್ನಬಸವೇಶ್ವರ ಎಂ.ಎಸ್ ರವರು ತುಮಕೂರು ಲೋಕಾಯುಕ್ತ ಪೋಲೀಸ್ ಠಾಣೆಗೆ ನೀಡಿದ ದೂರಿನನ್ವಯ ಪೋಲೀಸ್ ಉಪಾಧೀಕ್ಷರು-1, ಕರ್ನಾಟಕ ಲೋಕಾಯುಕ್ತ ಪೋಲೀಸ್

--2

ಠಾಣೆ, ತುಮಕೂರು ರವರು ದಿನಾಂಕ: 11.12.2025 ರಂದು ಜಿಲ್ಲಾ ಕೈಗಾರಿಕಾ ಕೇಂದ್ರ ತುಮಕೂರು ಕಛೇರಿಯ ಮೇಲೆ ದಾಳಿ ನಡೆಸಿ ಶ್ರೀ ಪ್ರಸಾದ್ ಎನ್.ಎಸ್ ಸಹಾಯಕ ನಿರ್ದೇಶಕರು(ಸ್ವ.ಪು), ಜಿಲ್ಲಾ ಕೈಗಾರಿಕಾ ಕೇಂದ್ರ ರವರು ಶ್ರೀ ಚನ್ನಬಸವೇಶ್ವರ ಎಂ.ಎಸ್ ರವರಿಂದ ಲಂಚದ ಹಣ ರೂ. 1,15,000/-ಗಳನ್ನು ಪಡೆಯುವಾಗ ಟ್ರಾಪ್ ಆಗಿರುತ್ತಾರೆ ಹಾಗೂ ಶ್ರೀ ಡಿ.ಕೆ. ಲಿಂಗರಾಜು, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ರವರನ್ನು ಆಪಾಧಿತ-1 ಎಂದು ದೂರು ನೀಡಿರುವುದರಿಂದ ಇಬ್ಬರೂ ಅಧಿಕಾರಿಗಳನ್ನು ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಬಂಧಿಸಿರುತ್ತಾರೆ. ಮೇಲ್ಕಂಡ ಅಧಿಕಾರಿಗಳ ವಿರುದ್ಧ ತುಮಕೂರು ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:13/2025 ಕಲಂ 7(ಎ) ರ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ 2018 ರಡಿ) ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಇದೇ ಮೊದಲ ಬಾರಿಗೆ ಕೇಂದ್ರ ಕಚೇರಿಯಿಂದ ಹಿರಿಯ ಅಧಿಕಾರಿಗಳ ಉಪಸ್ಥಿತಿಯನ್ನು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಬಯಸಿದ ಹಿನ್ನಲೆಯಲ್ಲಿ ತುಮಕೂರು ಜಿಲ್ಲೆಗೆ ನಿಯೋಜಿಸಿರುವ ನೋಡಲ್ ಅಧಿಕಾರಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇನ್ವೆಸ್ಟ್ ಕರ್ನಾಟಕ ಫೋರಂ, ಬೆಂಗಳೂರು ರವರಿಗೆ ಸ್ಥಳಕ್ಕೆ ತೆರಳಲು ತಿಳಿಸಲಾಗಿತ್ತು. ಕರ್ನಾಟಕ ಲೋಕಾಯುಕ್ತ ಪೋಲೀಸ್ ಠಾಣೆ, ತುಮಕೂರು ಇವರು ಸದರಿಯವರಿಗೆ ನೀಡಿರುವ ವರದಿಯನ್ನು ಈ ಕಚೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪಾದಿತ-1 ಶ್ರೀ ಡಿ.ಕೆ. ಲಿಂಗರಾಜ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ಇವರು ಗ್ರೂಪ್ 'ಎ' ವೃಂದಕ್ಕೆ ಸೇರಿದ ಅಧಿಕಾರಿಯಾಗಿರುವುದರಿಂದ ಪೊಲೀಸ್ ಉಪಾಧೀಕ್ಷಕರು-1 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ತುಮಕೂರು ಇವರ ದಿನಾಂಕ:11.12.2025ರ ಪತ್ರ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇನ್ವೆಸ್ಟ್ ಕರ್ನಾಟಕ ಫೋರಂ, ಬೆಂಗಳೂರು ಇವರ ದಿನಾಂಕ:12.12.2025ರ ಪತ್ರದ ಪ್ರತಿಗಳನ್ನು ಲಗತ್ತಿಸಿ ಸರ್ಕಾರದ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಡಿ.ಕೆ.ಲಿಂಗರಾಜು, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ಇವರು 48 ಗಂಟೆಗಳಿಗೂ ಮೀರಿ ಹೆಚ್ಚಿನ ಅವಧಿಗೆ ನ್ಯಾಯಾಂಗ ಬಂಧನದಲ್ಲಿರುವುದರಿಂದ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(2)(ಎ) ಪ್ರಕಾರ ಇವರು ನ್ಯಾಯಾಂಗ ಬಂಧನಕ್ಕೆ ಒಳಗಾದ ಕೂಡಲೇ ಅಮಾನತ್ತಿನಲ್ಲಿರುವುದಾಗಿ ಪರಿಗಣಿಸಬೇಕಾಗಿರುವುದರಿಂದ (deemed to have been suspended) ಮತ್ತು ಪ್ರಕರಣದ ಸುಗಮ ತನಿಖೆಯ ಸಲುವಾಗಿ ಹಾಗೂ ಅಧಿಕಾರಿಯು ಸದರಿ ಹುದ್ದೆಯಲ್ಲಿಯೇ ಮುಂದುವರೆದಲ್ಲಿ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ / ತಿರುಚುವ ಸಾಧ್ಯತೆಗಳನ್ನು ತಪ್ಪಿಸುವ ದೃಷ್ಟಿಯಿಂದ, ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಲು ಹಾಗೂ ಸದರಿಯವರ ಲೀನ್ ಬದಲಾಯಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ವಾಕೈ 264 ಕೈಸೇವಿ 2025, ಬೆಂಗಳೂರು, ದಿನಾಂಕ: 03.01.2026.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ಕೆ. ಲಿಂಗರಾಜು, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು ಇವರನ್ನು ದಿನಾಂಕ: 11.12.2025 ರಂದು ಲಂಚ ಸ್ವೀಕಾರದ ಆರೋಪದ ಮೇಲೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದವರು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನದಲ್ಲಿರಿಸಿದ್ದು, ನ್ಯಾಯಾಂಗ ಬಂಧನದಲ್ಲಿದ್ದ ಅವಧಿಯು 48 ಗಂಟೆಗಳಿಗೂ ಮೀರಿರುವುದರಿಂದ ಹಾಗೂ ಇವರು ಸದರಿ ಹುದ್ದೆಯಲ್ಲಿಯೇ ಮುಂದುವರೆದಲ್ಲಿ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ / ತಿರುಚುವ ಸಾಧ್ಯತೆ ಇರುವುದರಿಂದ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(2)(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಇವರನ್ನು ನ್ಯಾಯಾಂಗ ಬಂಧನಕ್ಕೆ ಒಳಗಾದ ದಿನಾಂಕ: 11.12.2025 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ. ಹಾಗೂ

--3

ಶ್ರೀ ಡಿ.ಕೆ. ಲಿಂಗರಾಜು, ಜಂಟಿ ನಿರ್ದೇಶಕರು ಇವರ ಲೀನ್ ಅನ್ನು ತುಮಕೂರಿನಿಂದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಇಲ್ಲಿಗೆ ಬದಲಾಯಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಡಿ.ಕೆ.ಲಿಂಗರಾಜು, ಜಂಟಿ ನಿರ್ದೇಶಕರು ಇವರು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 98 ರಂತೆ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಅಮಾನತ್ತಿನ ಅವಧಿಯಲ್ಲಿ ಇವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
3/1/2024
(ಎಸ್. ಅರುಣ್)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

**ಇವರಿಗೆ:-**

1. ಮಹಾಲೇಖಪಾಲರು (ಎ &ಇ), ಕರ್ನಾಟಕ, ಬೆಂಗಳೂರು.
2. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ತುಮಕೂರು / ಹಾವೇರಿ ಜಿಲ್ಲೆ.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು / ಹಾವೇರಿ ಜಿಲ್ಲೆ.
5. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಪೊಲೀಸ್ ಉಪಾಧೀಕ್ಷಕರು-1 ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ತುಮಕೂರು.
8. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು / ಹಾವೇರಿ.
9. ಶ್ರೀ ಡಿ.ಕೆ.ಲಿಂಗರಾಜು, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು. (RPAD / Speed Post ಮುಖಾಂತರ)
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಕೃತ ಅಂತರ್ಜಾಲತಾಣ
www.industry.karnataka.gov.in ವೀಕ್ಷಿಸಿ